**ದಿಃ 10.09.2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ    ವಕೀಲರಿಂದಃ

ನನ್ನ ಅಜ್ಜನ ಜೀವಿತಾವಧಿಯಲ್ಲಿ ಅವರಿಗೆ ಯಾರ ಜೊತೆಯಾದರೂ ವಾಜ್ಯವಿತ್ತಾ ಎಂದರೆ ಸಾಕ್ಷಿ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಸದರಿಯವರು ಯಾವ ರೀತಿ ಸ್ವಭಾವದವರು ಎಂದರೆ ಸಾಕ್ಷಿ ಸೌಮ್ಯ ಸ್ವಭಾವದವರು ಎಂದು ನುಡಿಯುತ್ತಾರೆ. ಸದರಿಯವರು ಎಲ್ಲರ ಜೊತೆ ಒಳ್ಳೆ ಬಾಂಧವ್ಯದಲ್ಲಿ ಇದ್ದರಾ ಎಂದರೆ ಸಾಕ್ಷಿ ಚೆನ್ನಾಗಿದ್ದರು ಎಂದು ನುಡಿಯುತ್ತಾರೆ. ಸದರಿಯವರು ಆಸ್ತಿಗೆ ಸಂಬಂಧಪಟ್ಟಂತೆ ಪಂಚಾಯತಿಗೆ ಮಾಡಿದ್ದಾರಾ ಎಂದರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ.

ನನ್ನ ಅಜ್ಜನ ಮಕ್ಕಳು ಅವರ ಜೀವಿತಾವಧಿಯಲ್ಲಿ ನನ್ನ ಅಜ್ಜನ ಜೊತೆ ಇರಲಿಲ್ಲ ಹಾಗೂ ಬೇರೆ ಬೇರೆ ಇದ್ದರು ಎಂದರೆ ಸಾಕ್ಷಿ ಕೆಲಸದ ನಿಮಿತ್ತ ಬೇರೆ ಬೇರೆ ಇದ್ದರು ಎಂದು ನುಡಿಯುತ್ತಾರೆ. ಜೇಬಿ ಡಿಸಿಲ್ವಾ ಬೆಳಗಾಂನಲ್ಲಿ ಇದ್ದರು ಎಂದರೆ ನಿಜ. ಹಾಗೂ ಪ್ರತಿವಾದಿ 7 ಮದುವೆಯಾಗಿ ಮುಂಬೈಯಲ್ಲಿ ವಾಸವಿದ್ದರು ಎಂದರೆ ಸಾಕ್ಷಿ ಮುಂಬೈ ಹಾಗೂ ವಿದೇಶದಲ್ಲಿದ್ದರು ಎಂದು ನುಡಿಯುತ್ತಾರೆ.

ನನ್ನ ಅಜ್ಜನ ಜೊತೆ ಅವರ ಮಕ್ಕಳ ಪೈಕಿ ನನ್ನ ತಂದೆ ಪ್ಯಾಟ್ರಿಕ್ ಡಿಸಿಲ್ವಾ ಮಾತ್ರ ಇದ್ದರು ಎಂದರೆ ನಿಜ. ಸದರಿಯವರು ಸೌಮ್ಯ ಸ್ವಭಾವದ ವ್ಯಕ್ತಿ ಎಂದರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ. ನನ್ನ ತಂದೆಯವರೊಂದಿಗೆ ದ್ವೇಷ ಇರುವ ಕಾರಣ ಅವರ ಸೌಮ್ಯ ಸ್ವಭಾವದವರಲ್ಲ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸುಳ್ಳು.

ನನ್ನ ಅಜ್ಜನ ಎಲ್ಲಾ ವ್ಯವಹಾರಗಳಲ್ಲೂ ಸಹಾಯಕರಾಗಿ ಇದ್ದರು ಎಂದರೆ ಸಾಕ್ಷಿ ಸದರಿ ಪ್ರಶ್ನೆ ದಾರಿ ತಪ್ಪಿಸುವ ರೀತಿ ಇದೆ ಎಂದು ನುಡಿಯುತ್ತಾರೆ. ನನಗೆ ಸಾಕ್ಷಿ ಹೇಳಲು ಕಷ್ಟ ಆಗುವ ಕಾರಣ ಅಸಂಬದ್ಧ ಉತ್ತರ ನೀಡುತ್ತಿದ್ದೇನೆ ಎಂದರೆ ಸುಳ್ಳು.

ನಿಡಿ-75ಕ್ಕೆ ಸಾಕ್ಷಿ ಎಂದು ಸಹಿ ಹಾಕಿದವರು ಪ್ರತಿವಾದಿ 6ರವರ ಒತ್ತಾಯದ ಮೇರೆಗೆ ಎಂದರೆ ಸುಳ್ಳು. ನಿಡಿ-75ರಲ್ಲಿ ಬರೆದ ವಿಚಾರಗಳು ನನ್ನ ಅಜ್ಜನ ಗಮನಕ್ಕೆ ಬಂದಿರುವುದಿಲ್ಲ ಎಂದರೆ ಸುಳ್ಳು. ನಿಡಿ-75ನ್ನು ಪ್ರತಿವಾದಿ 6 ಹಾಗೂ ಸಾಕ್ಷಿದಾರರಾಗಿ ಸಹಿ ಮಾಡಿದವರು ಸೇರಿ ಮಾಡಿರುವ ಸುಳ್ಳು ದಾಖಲೆ ಎಂದರೆ ಸುಳ್ಳು. ನಿಡಿ-75ಎ ದಾಖಲೆಯನ್ನು ಯಾರು ಕೊಟ್ಟಿರುವುದು ಎಂದರೆ ಸಾಕ್ಷಿ 6ನೇ ಪ್ರತಿವಾದಿ ಎಂದು ನುಡಿಯುತ್ತಾರೆ. ಸದರಿ ದಾಖಲೆಯನ್ನು ಅವರಿಗೆ ಕೊಟ್ಟವರು ಯಾರು ಎಂದರೆ ನನಗೆ ಗೊತ್ತಿಲ್ಲ. ನಿಡಿ-75ಕ್ಕೆ ಕಂದಾಯ ನಿರೀಕ್ಷಕರು ಸಹಿ ಮಾಡಿರುವುದನ್ನು ನಾನು ನೋಡಿದ್ದೇನಾ ಎಂದರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ. ನಿಡಿ75ಕ್ಕೆ ಕಂದಾಯ ನಿರೀಕ್ಷಕರು ಸಹಿ ಮಾಡದೇ ಇದ್ದರೂ ನಾನು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸುಳ್ಳು.

ನಿಡಿ-66 ದಾಖಲೆ ಬರೆಯಲು ಯಾರು ಮಾಹಿತಿ ನೀಡಿರುವುದು ಎಂದರೆ ಸಾಕ್ಷಿ ನೆನಪಿಲ್ಲ ಎಂದು ನುಡಿಯುತ್ತಾರೆ. ಸದರಿ ದಾಖಲೆಗೆ ಸಾಕ್ಷಿದಾರರು ಯಾರು ಎಂದರೆ ಸಾಕ್ಷಿ ನೆನಪಿಲ್ಲ ಎಂದು

ನುಡಿಯುತ್ತಾರೆ. ನಿಡಿ–**66** ತಯಾರಿಸಲು ಬರಹಗಾರರಿಗೆ ಮಾಹಿತಿ ನೀಡಿರುತ್ತೇನಾ ಎಂದರೆ ಸಾಕ್ಷಿ ಸ್ಪಷ್ಟವಾಗಿ ನೆನಪಿಲ್ಲ ಎಂದು ನುಡಿಯುತ್ತಾರೆ. ನಿಡಿ–**66**ರಲ್ಲಿ ಯಾವ ಸರ್ವೆ ನಂಬರ್ ತೋರಿಸಿರುವುದು ಎಂದರೆ ಸಾಕ್ಷಿ ಸರ್ವೆ ನಂಬರ್ **235/1**ಎ ಎಂದು ನುಡಿಯುತ್ತಾರೆ, ಖಾತಾ ನಂಬರ್ ಏನು ಎಂದರೆ ಸಾಕ್ಷಿ ನನಗೆ ನೆನಪಿಲ್ಲ ಎಂದು ನುಡಿಯುತ್ತಾರೆ. ನಾನು ಸದರಿ ಆಸ್ತಿಗೆ ಸಂಪೂರ್ಣ ಹಕ್ಕುದಾರನು ಎಂದು ಸದರಿ ದಾಖಲೆಯಲ್ಲಿ ತಿಳಿಸಿದ್ದು ಅದಕ್ಕೆ ಏನು ಆಧಾರ ಎಂದರೆ ಸಾಕ್ಷಿ ನೆನಪಿಲ್ಲ ಎಂದು ನುಡಿಯುತ್ತಾರೆ. ಸದರಿ ದಾಖಲೆ ಸೃಷ್ಟಿಸಿದ ದಾಖಲೆ ಹಾಗೂ ಅದಕ್ಕೆ ಮಾನ್ಯತೆ ಇರುವುದಿಲ್ಲ ಎಂದರೆ ಸುಳ್ಳು. ನಾನು ಸದರಿ ಜಮೀನಿನ ಹಕ್ಕುದಾರನು ಅಲ್ಲದೇ ಇದ್ದರೂ ಹಕ್ಕುದಾರ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸಾಕ್ಷಿ ಸದರಿ ದಾಖಲೆ ಕರಾರು ಎಂದು ನುಡಿಯುತ್ತಾರೆ. ಸದರಿ ದಾಖಲೆ ಹಾಜರುಮಾಡುವ ಕಾಲಕ್ಕೆ ಸರ್ವೆ ನಂಬರ್ **235/1**ಎ ರಲ್ಲಿ ಯಾರು ಇದ್ದರು ಎಂದರೆ ಸಾಕ್ಷಿ ನೆನಪಿಲ್ಲ ಎಂದು ನುಡಿಯುತ್ತಾರೆ. ಖಾತೆ ನಂಬರ್ **14/87** ಯಾರ ಹೆಸರಿನಲ್ಲಿತ್ತು ಎಂದರೆ ಸಾಕ್ಷಿ ಜೇಬಿ ಡಿಸಿಲ್ವಾ ರವರ ಹೆಸರಿನಲ್ಲಿ ಎಂದು ನುಡಿಯುತ್ತಾರೆ.

ನಿಡಿ–**35** ರ ಆಧಾರದಲ್ಲಿ ನಾನು ಎಷ್ಟು ದಾಖಲೆ ಮಾಡಿಕೊಟ್ಟಿರುತ್ತೇನೆ ಎಂದರೆ ಸಾಕ್ಷಿ **3** ಎಂದು ನುಡಿಯುತ್ತಾರೆ. ಸದರಿ ದಾಖಲೆಗಳು ಯಾವುದು ಹಾಗೂ ಯಾರಿಗೆ ಬರೆದುಕೊಟ್ಟಿದ್ದೇನೆ ಎಂದರೆ ಸಾಕ್ಷಿ ನಿಡಿ–**36,** ನಿಡಿ–**37** ಹಾಗೂ ನಿಡಿ–**39** ಎಂದು ನುಡಿಯುತ್ತಾರೆ. ನಿಡಿ–**36** ಮತ್ತು **37**ರ ಪ್ರತಿಫಲ ಹಣವನ್ನು ಜೇಬಿ ಡಿಸಿಲ್ವಾ ಇವರಿಗೆ ಯಾವ ರೀತಿ ಕೊಟ್ಟಿರುತ್ತೇನೆ ಎಂದರೆ ಸಾಕ್ಷಿ ನಗದಿನ ಮುಖಾಂತರ ಎಂದು ನುಡಿಯುತ್ತಾರೆ. ಸದರಿ ನಗದನ್ನು ದಾಖಲೆ ಮಾಡುವ ಮೊದಲೋ ಅಥವಾ ನಂತರ ಕೊಟ್ಟಿರುತ್ತೀರಾ ಎಂದರೆ ಸಾಕ್ಷಿ ನೆನಪಿಲ್ಲ ಎಂದು ನುಡಿಯುತ್ತಾರೆ. ನಿಡಿ–**35**ರಲ್ಲಿ ಹಣವನ್ನು ಯಾವ ರೀತಿ ಪಾವತಿ ಮಾಡಬೇಕು ಹಾಗೂ ಇನ್ವೆಸ್ಟ್ ಮಾಡಬೇಕೆಂದು ತೋರಿಸಿರುತ್ತಾರೆ ಎಂದರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ. ನಿಡಿ–**36,** ನಿಡಿ–**37** ಹಾಗೂ ನಿಡಿ–**39**ನ್ನು ನಾನು ಬರೆದುಕೊಟ್ಟಿರುವುದು **8**ನೇ ಪ್ರತಿವಾದಿಗೆ ಎಂದರೆ ನಿಜ. ಜೇಬಿ ಡಿಸಿಲ್ವಾರವರು **8**ನೇ ಪ್ರತಿವಾದಿಗೆ ಸದರಿ ದಾಖಲೆಗಳನ್ನು ಬರೆದುಕೊಡಲು ನಿಡಿ–**35**ರಲ್ಲಿ ಅಧಿಕಾರ ನೀಡಿಲ್ಲ ಎಂದರೆ ಸುಳ್ಳು.

**8**ನೇ ಪ್ರತಿವಾದಿ ಜೇಬಿ ಡಿಸಿಲ್ವಾ ರವರಿಗೆ ಏನಾಗಬೇಕು ಎಂದರೆ ಸಾಕ್ಷಿ ಸೊಸೆ ಎಂದು ನುಡಿಯುತ್ತಾರೆ. ನಿಡಿ–**36,** ನಿಡಿ–**37** ಹಾಗೂ ನಿಡಿ–**39**ನ್ನು ಬರಹಗಾರರಿಗೆ ಬರೆಯಲು ಯಾರು ಮಾಹಿತಿ ನೀಡಿದರು ಎಂದರೆ ಸಾಕ್ಷಿ ತಾನು ಹಾಗೂ ಜೇಬಿ ಡಿಸಿಲ್ವಾ ಎಂದು ನುಡಿಯುತ್ತಾರೆ. ಸದರಿ ದಾಖಲೆಗಳು ನೋಂದಣಿ ಯಾಗುವಾಗ ಜೇಬಿ ಡಿಸಿಲ್ವಾ ಇದ್ದರಾ ಎಂದರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ. ನಿಡಿ–**36,** ನಿಡಿ–**37** ಹಾಗೂ ನಿಡಿ–**39**ರ ಪ್ರಕಾರ **8**ನೇ ಪ್ರತಿವಾದಿಗೆ ಯಾವುದೇ ಹಕ್ಕು ಪ್ರಾಪ್ತ ಆಗಿರುವುದಿಲ್ಲ ಎಂದರೆ ಸುಳ್ಳು. ಅದೇ ರೀತಿ ಸದರಿ ದಾಖಲೆಗಳ ಪ್ರಕಾರ **8**ನೇ ಪ್ರತಿವಾದಿ ಸ್ವತ್ತಿನ ಸ್ವಾದೀನ ಹೊಂದಿರುವುದಿಲ್ಲ ಎಂದರೆ ಸುಳ್ಳು. ಅದೇ ರೀತಿ **8**ನೇ ಪ್ರತಿವಾದಿ ಸದರಿ ಜಮೀನಿನಲ್ಲಿ ಕೃಷಿ ಮಾಡಿದ್ದಾರೆ ಎಂದು ತಿಳಿಸಿರುವ ವಿಚಾರ ಸಹ ಸುಳ್ಳು ಎಂದರೆ ಸುಳ್ಳು. **8**ನೇ ಪ್ರತಿವಾದಿ ಅವರ ಪರ ಸಾಕ್ಷಿ ಹೇಳಲು ಅಧಿಕಾರ ಪತ್ರ ನೀಡಿದ್ದಾರಾ ಎಂದರೆ ಸಾಕ್ಷಿ ಮೌಖಿಕವಾಗಿ ತಿಳಿಸಿರುತ್ತಾರೆ ಎಂದು ನುಡಿಯುತ್ತಾರೆ. **8**ನೇ ಪ್ರತಿವಾದಿ ಹೆಸರಿಗೆ ಭೂ ಪರಿವರ್ತನೆ ಆದೇಶ ಆಗಿದೆ ಹಾಗೂ ಲೈಸೆನ್ಸ್ ನೀಡಲಾಗಿದೆ ಎಂದು ನೀಡಿರುವ ದಾಖಲೆಗಳು ಸೃಷ್ಟಿ ಮಾಡಿರುವುದು ಎಂದರೆ ಸುಳ್ಳು.

ನಿಡಿ-95ನ್ನು ಯಾರು ಬರೆದುಕೊಟ್ಟಿರುವುದು ಎಂದರೆ ಸಾಕ್ಷಿ ಪ್ರತಿವಾದಿ 6 ಎಂದು ನುಡಿಯುತ್ತಾರೆ. ನಿಡಿ-95 ಸಹಾ ಸುಳ್ಳು ದಾಖಲೆ ಎಂದರೆ ಸುಳ್ಳು.

ದಾವಾ ಐಟಂ ನಂಬರ್ 7 ಮತ್ತು 8ರ ಮೂಲಕ್ರಯಪತ್ರ ಯಾರ ಬಳಿ ಇದೆ ಎಂದರೆ ಸಾಕ್ಷಿ ನೆನಪಿಲ್ಲ ಎಂದು ನುಡಿಯುತ್ತಾರೆ. ನನ್ನ ಬಳಿ ಇರುವುದಿಲ್ಲವಾ ಎಂದರೆ ಸಾಕ್ಷಿ ನೆನಪಿಲ್ಲ ಎಂದು ನುಡಿಯುತ್ತಾರೆ. ದಾವಾ ಐಟಂ ನಂಬರ್ 7 ಮತ್ತು 8 ಖರೀದಿಸುವ ಪೂರ್ವದಲ್ಲಿ ಜೇಬಿ ಡಿಸಿಲ್ವಾ ರವರು ಧರ್ಮಗುರುಗಳಾಗಿದ್ದರು ಎಂದರೆ ನಿಜ. ಸದರಿ ದಾಖಲೆ ಮಾಡುವ ಕಾಲಕ್ಕೆ ಅವರ ಮೇಲಿನವರಿಂದ ಅನುಮತಿ ಪಡೆದಿದ್ದರಾ ಎಂದರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ. ಸದರಿಯವರು ಧರ್ಮಗುರುಗಳು ಆದ ಕಾರಣ ಅವರ ಬಳಿ ಆದಾಯ ಇರಲಿಲ್ಲ, ಹಾಗೂ ಖರೀದಿಗೆ ಹಣವನ್ನು ನನ್ನ ಅಜ್ಜ ಕೊಟ್ಟಿರುವುದು ಎಂದರೆ ಸುಳ್ಳು.

ವಾದಿಯವರಿಗೆ ಜಮೀನು ಹೋಗಬಾರದು ಎಂಬ ಕಾರಣಕ್ಕೆ ನಾನು ಹಾಗೂ 6ನೇ ಪ್ರತಿವಾದಿ ಇಬ್ಬರೂ ಸೇರಿಕೊಂಡು ಸುಳ್ಳು ಸಾಧನೆ ಮಾಡುತ್ತಿದ್ದೇವೆ ಎಂದರೆ ಸುಳ್ಳು.

ಮರು ವಿಚಾರಣೆ ಇಲ್ಲ.

**ನನ್ನ ಉಕ್ತಲೇಖನ ರೀತ್ಯಾ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.**

**ಓ ಹೇ ಕೇ ಸ ಇದೆ.**

**ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ.,**
**ಬಂಟ್ವಾಳ.**